## ನ್ಯಾನೋ ತೆಂಗಿನಕಾಯಿ



ನ್ಯಾನೋ ಕಾರುಗಳು ದೇಶಕ್ಕೆ ಕಾಲಿಟ್ಟ ಬಳಿ ನ್ಯಾನೋ ಪದ್ಧತಿಯೂ ದೇಶದಲ್ಲಿ ಹೆಚ್ಚು ಜನಜನಿತವಾಯಿತು ಎನ್ನಬಹುದು. ಮನುಷ್ಯ ಉತ್ಪಾದಿಸುವ ಉತ್ಪನ್ನಗಳಲ್ಲಿ ಮಾತ್ರ ಇಷ್ಟು ದಿನ ನ್ಯಾನೋ ಪದ್ಧತಿ ಕಾಣಬಹುದಾಗಿತ್ತು. ಆದರೆ, ಸೃಷ್ಟಿಯ ವೈರುಧ್ಯಕ್ಕೆ ಕೊನೆಯೇ ಇಲ್ಲವಾಗಿದ್ದು, ಇಲ್ಲೊಂದೆರೆಡು ತೆಂಗಿನಕಾಯಿಗಳೂ ನ್ಯಾನೋ ಪದ್ಧತಿಯನ್ನು ಅಳವಡಿಸಿಕೊಂಡಂತಿವೆ. ಈ ಚಿತ್ರವನ್ನು ಗಮನಿಸಿದರೆ ಈ ಮಾತು ನಿಜವೆನಿಸುತ್ತದೆ. ಶಾಲೆಯೊಂದರ ಹಿಂದಿ ಶಿಕ್ಷಕ ಡಿ.ಪಿ.ಚವಲಗಿ ಅವರ ತೋಟದಲ್ಲಿ ಕಂಡು ಬಂದ ತೆಂಗಿನಕಾಯಿ ಇದಾಗಿದ್ದು, ಇದು ಅತಿ ಚಿಕ್ಕದಾಗಿದೆ. ಅಂಗೈನಲ್ಲಿ ಇಂತಹ 5 ರಿಂದ 6 ತೆಂಗಿನ ಕಾಯಿಗಳನ್ನು ಇರಿಸಿಕೊಳ್ಳಬಹುದು.

■ **ಶ್ರೀಶೈಲ ಎಸ್. ಅಂಗಡಿ, ಹುಣಸೀಕಟ್ಟೆ**



## ಹೂಜಿಯಂತಹ ತಾಮ್ರದ ಕೊಳಗ

ಈ ಚಿತ್ರದಲ್ಲಿ ಕಾಣುವ ತಾಮ್ರದ ಕೊಳಗ ಹಳೆಯಕಾಲದ ಹೂಜಿಯಂತಿದೆ. ಇದನ್ನು ಕೈಯಲ್ಲಿ ಎತ್ತಿ ಹಿಡಿಯಲು ಎರಡು ಕಡೆ ರಿಂಗ್‌ಗಳಿವೆ. ಮುಚ್ಚಳ ಹಾಗೂ ಅದಕ್ಕೂ ಒಂದು ಚಿಕ್ಕ ಹಿಡಿಯೂ ಈ ತಾಮ್ರದ ಕೊಳಗಕ್ಕಿದೆ. ಅನೇಕ ವರ್ಷಗಳ ಇತಿಹಾಸ ಇದಕ್ಕಿದ್ದು, ಹಳೆಯದಾಗಿದೆಂದು ಎಸೆಯದೆ ಜೋಪಾನವಾಗಿ ಬೆಂಗಳೂರಿನ ಬುಲ್ ಟೆಂಪಲ್ ರಸ್ತೆಯ ಗಂಜಾಂ ಕಲ್ಯಾಣ ಮಂಟಪದ ತೋಟದಲ್ಲಿ ಇಡಲಾಗಿದೆ. ಸುಂದರವಾದ ಹಾಗೂ ಕಲಾತ್ಮಕವಾದ ತಳ ಭಾಗವನ್ನು ಇದಕ್ಕೆ ಅಳವಡಿಸಲಾಗಿದೆ. ಅದರ ಮೇಲೆ ಇಟ್ಟ ಈ ಕೊಳಗ ಹೂವಿನ ತೋಟದ ಮುಖ್ಯ ಆಕರ್ಷಣೆಯಾಗಿದೆ.

■ **ಅರ್ಪಿತಾ ಕುಮಾರಿ, ಬೆಂಗಳೂರು**

## ಹಸಿರೆಲೆ ಹುಳ

ಮಲೆನಾಡಿನಲ್ಲಿ ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ಹುಳ–ಹುಪ್ಪಟೆಗಳ ಚಲನವಲನ ಕೂಡಾ ಶುರುವಾಗಿ ಬಿಡುತ್ತದೆ. ಹಸಿರು ಬಣ್ಣದ ಈ ಹುಳ ಎಲೆಯನ್ನೇ ತನ್ನ ದೇಹದ ಮೇಲ್ಭಾಗಕ್ಕೆ ಹೊದಿಕೆಯಂತೆ ಮಾಡಿಕೊಂಡಿರುವುದು ಅಚ್ಚರಿಯನ್ನುಂಟು ಮಾಡಿದೆ. ಎಲೆಗಳ ಮೇಲೆ ಯಾವುದೇ ಕೀಟಗಳು ಬಂದಾಗ ಅದನ್ನು ಹಿಡಿಯಲು ಅನುಕೂಲವಾಗುವಂತೆ ಈ ಹುಳದ ಕೊಂಬುಗಳು ಸಹಾಯ ಮಾಡುತ್ತವೆ.

■ **ವಿನುತಾ ರಾವ್, ಹೆಬ್ಬಾಗಿಲುಮನೆ, ಬಿಳಲಕೊಪ್ಪ**

